◆ **ಪುಸ್ತಕಗಳ ಸಹವಾಸದ ಬಗ್ಗೆ ಏನು ಹೇಳುವಿರಿ?**

ಮಿಕ್ಸೋಕ್‌ನ ಮನೆಯಲ್ಲಿ ಬಹಳ ಚಂದದ ಲೈಬ್ರರಿಯಿತ್ತು. ಆರೋ ಏಳೋ ಸಾವಿರ ಪುಸ್ತಕಗಳಿದ್ದವು. ಅವುಗಳನ್ನು ಓದುವ ಸ್ವಾತಂತ್ರ್ಯವಿತ್ತು. ನಾನು ಓದುವ ವಿಷಯದಲ್ಲಿ ಭಯಂಕರ ಹೊಟ್ಟೆಬಾಕ. ಚಿಕ್ಕವನಾಗಿದ್ದಾಗ 'ಓದಬಾರದ' ಪುಸ್ತಕಗಳನ್ನು ಓದಿಬಿಟ್ಟಿದ್ದೆ. ಏಕೆಂದರೆ, ನಾನೇನು ಓದುತ್ತಿದ್ದೇನೆ ಎನ್ನುವ ಕುರಿತು ಯಾರೂ ಗಮನಹರಿಸುತ್ತಿರಲಿಲ್ಲ. ಇನ್ನೂ ಚಿಕ್ಕವನಿದ್ದಾಗಲೇ ವೋಲ್‌ಟೈರ್‌ನನ್ನು (ಫ್ರೆಂಚ್ ಬರಹಗಾರ) ಓದಿದ್ದೆ. ಬಹುಶಃ ಅದಕ್ಕೆ ಧರ್ಮದ ಬಗ್ಗೆ ನಂಬಿಕೆ ಹೊರಟುಹೋಯಿತು. ಅಶ್ಲೀಲವಲ್ಲದ ಆದರೆ, ಸ್ವೇಚ್ಛಾಚಾರದ ಕಾದಂಬರಿಗಳನ್ನು ಓದಿದ್ದೇನೆ.

◆ **ಮಕ್ಕಳ ಪುಸ್ತಕಗಳನ್ನು ಓದಿದ್ದೀರಾ?**

ಓದಿದ್ದೆ. ಆಗ ಮೆಕ್ಸಿಕೊದಲ್ಲಿ ಬಹಳ ಜನಪ್ರಿಯವಾಗಿದ್ದ ಇಟಾಲಿಯನ್ ಲೇಖಕ ಸಲ್ಗರಿಯ ಬಹಳಷ್ಟು ಪುಸ್ತಕಗಳನ್ನು ಓದಿದ್ದೇನೆ. ಜೊತೆಗೆ ಜ್ಯೂಲ್ಸ್ ವರ್ನ್ (ಫ್ರೆಂಚ್ ಲೇಖಕ) ಓದಿದ್ದೇನೆ. ಅಮೆರಿಕದ ಬಫೆಲೋ ಬಿಲ್ ನನ್ನ ಹೀರೊಗಳಲ್ಲೊಬ್ಬ. ನಾನು ಮತ್ತು ನನ್ನ ಸ್ನೇಹಿತರು ಒಮ್ಮೆ ಅಲೆಗ್ಸಾಂಡರ್ ಡುಮಾಸ್‌ನ 'ಥ್ರೀ ಮಸ್ಕಿಟೀರ್ಸ್' (ಫ್ರೆಂಚ್ ಕಾದಂಬರಿ) ಪಾತ್ರಗಳಾದರೆ ಮತ್ತೊಮ್ಮೆ ಕೌಬಾಯ್‌ಗಳಾಗಿ ಬಿಡುತ್ತಿದ್ದೆವು. ಒಂದಿನಿತೂ ತಲೆಕೆಡಿಸಿಕೊಳ್ಳದೆ ನಮ್ಮದೇ ರೀತಿಯಲ್ಲಿ ಇತಿಹಾಸವನ್ನು ಹೀಗೆ ಅದಲುಬದಲು ಮಾಡುತ್ತಿದ್ದೆವು.

◆ **1937ರಲ್ಲಿ ವಿಶ್ವವಿದ್ಯಾಲಯಕ್ಕೆ ಸೇರಿದಾಗ ಮಹತ್ವದ ನಿರ್ಧಾರವೊಂದನ್ನು ಮಾಡಿದಿರಿ.**

ಅಂತಹ ಬಹಳಷ್ಟು ನಿರ್ಧಾರಗಳನ್ನು ಮಾಡಿದ್ದೇನೆ. ಮೊದಲಿಗೆ ಯುಕಾಟಾನ್‌ಗೆ, ವಿಶ್ವವಿದ್ಯಾಲಯಕ್ಕೆ ಹೋದೆ. ಆದರೆ, ಪದವಿ ಪಡೆಯುವ ಮೊದಲೇ ಬಿಟ್ಟೆ. ಲಾಯರ್ ಆಗುವುದಿಲ್ಲವೆಂದೆ. ನನ್ನ ಮನೆಯವರು ಆಗಿನ ಎಲ್ಲ ಮೆಕ್ಸಿಕನ್ ಮಧ್ಯಮವರ್ಗದ ಕುಟುಂಬದವರಂತೆ ತಮ್ಮ ಒಬ್ಬನೇ ಮಗ ಡಾಕ್ಟರ್ ಅಥವಾ ಲಾಯರ್ ಆಗಬೇಕೆಂದು ಬಯಸಿದ್ದರು. ನಾನು ಕವಿಯಾಗಬೇಕೆಂದಿದ್ದೆ. ಜೊತೆಗೆ, ಕ್ರಾಂತಿಕಾರಿ. ನನ್ನ ಕೆಲ ಗೆಳೆಯರೊಂದಿಗೆ ಯುಕಾಟಾನ್‌ಗೆ ಹೋಗಿ ಅಲ್ಲಿನ ಕಾರ್ಮಿಕರು ಮತ್ತು ರೈತರ ಮಕ್ಕಳಿಗೆ ಪಾಠ ಮಾಡುವ ಅವಕಾಶ ಒದಗಿಬಂದಿತು. ಅದೊಂದು ಅದ್ಭುತ ಅನುಭವ. ನಾನೊಬ್ಬ ಪಟ್ಟಣದ ಹುಡುಗ. ನನ್ನದು ಮೆಕ್ಸಿಕೊ ನಗರದ ಅನುಭವ ಎನ್ನುವುದು ಅರಿವಾಯಿತು.

◆ **ಅಕ್ಟೇವಿಯೊ, ನೀವು ಕವಿ ಹಾಗೂ ಪ್ರಬಂಧಕಾರ. ನಿಮ್ಮಲ್ಲಿ ಕಾದಂಬರಿ ಬರೆಯುವ ತುಡಿತ ಕೂಡ ಇರುವಂತಿದೆ. 1938ರಲ್ಲಿ ಪ್ರಕಟಿಸಿದ 'ಡೈರಿ ಆಫ್ ಎ ಡ್ರೀಮರ್' ಮತ್ತು 1970ರಲ್ಲಿ ಬಂದ 'ದ ಮಂಕಿ ಗ್ರಾಮರಿಯನ್' ನೋಡಿದರೆ ಹಾಗನ್ನಿಸುತ್ತದೆ.**

ಡೈರಿಯನ್ನು ಕಾದಂಬರಿ ಅನ್ನಲಾರೆ. ಅದೊಂತರ ಧ್ಯಾನದ ಟಿಪ್ಪಣಿಗಳನ್ನು ಬರೆದ ಪುಸ್ತಕ. ರಿಲ್ಕ್‌ನ 'ನೋಟ್‌ಬುಕ್ಸ್ ಆಫ್ ಮಾಲ್ಟೆ ಲಾರೆಡ್ಸ್ ಬ್ರಿಗ್' ಪುಸ್ತಕದಿಂದ ಪ್ರಭಾವಿತನಾಗಿದ್ದೆ. ಕಾದಂಬರಿ ಬರೆಯಬೇಕೆಂದು ಆಸೆಯಾಗುವುದಂತೂ ಸತ್ಯ. ಆದರೆ, ನಾನದಕ್ಕೆ ಹೊಂದಿಕೊಳ್ಳುವುದಿಲ್ಲ. ಕಾದಂಬರಿ ಬರೆಯುವುದೆಂದರೆ, ಎರಡು ಭಿನ್ನ ವಿಷಯಗಳನ್ನು ಸಂಯೋಜಿಸುವ ಕಲೆ. ಅದು ಮಹಾಕಾವ್ಯವಿದ್ದಂತೆ. ಅದರ ದೊಡ್ಡ ಪಾತ್ರ ಪ್ರಪಂಚ, ಅವರ ಕೆಲಸಗಳು ಆ ಕೃತಿಯ ಸಾರ... ಕಾದಂಬರಿ ವಿಮರ್ಶಾತ್ಮಕ ಕೂಡ. ಪಾತ್ರಗಳ ಕ್ರಿಯೆಯನ್ನು ಹೇಳುತ್ತಲೇ ಅದನ್ನು ವಿಮರ್ಶಿಸುತ್ತದೆ. ಟಾಮ್ ಜೋನ್ಸ್, ಒಡೆಟ್ ಡಿ ಕ್ರೆಸಿ, ಇವಾನ್ ಕರಮಜೋವ್, ಅಥವಾ ಡಾನ್ ಕ್ವಿಕ್ಸೋಟ್ಟೆ (ವಿವಿಧ